# ತುಳಸಿ ಹಬ್ಬ..





ಕಾರ್ತೀಕ ಶುದ್ಧ ದ್ವಾದಶಿಯಂದು ತುಳಸಿ ಹಬ್ಬ. ಇದು 'ಉತ್ಥಾನ ದ್ವಾದಶಿ'ಯೂ ಹೌದು. ಈ ಸಲ ನವೆಂಬರ್ 7ರಂದು ತುಳಸಿ ಹಬ್ಬ.

ಎನ್.ಎಸ್. ಶಾರದ

ಕಾರ್ತೀಕ ಶುದ್ಧ ದ್ವಾದಶಿಯಂದು ಭಾರತೀಯರು ತುಳಸಿ ಹಬ್ಬವನ್ನು ಆಚರಿಸುತ್ತಾರೆ. 'ಉತ್ಥಾನ ದ್ವಾದಶಿ' ಎಂಬುದು ಇದರ ಇನ್ನೊಂದು ಹೆಸರು.

ಮನೆಯ ಬಲಭಾಗದಲ್ಲಿ ತುಳಸಿ ಕಟ್ಟೆ ಇರುತ್ತದೆ. ಪ್ರತೀ ದಿನ ಸ್ನಾನದ ನಂತರ ತುಳಸಿ ಪೂಜೆ ಮಾಡಿ ಅದಕ್ಕೆ ಪ್ರದಕ್ಷಿಣೆ ನಮಸ್ಕಾರ ಮಾಡುವ ಸಂಪ್ರದಾಯ ಮಹಿಳೆಯರಲ್ಲಿದೆ. ಇದರಿಂದ ಮನಸ್ಸಿಗೆ ಶಾಂತಿ; ಪ್ರದಕ್ಷಿಣೆ ನಮಸ್ಕಾರ ಮಾಡುವುದರಿಂದ ದೇಹಕ್ಕೆ ವ್ಯಾಯಾಮ. ಈ ಬೃಂದಾವನ ಮನೆಯ ಹೊರಗೆ ಅಂಗಳದಲ್ಲಿ ಇರುವುದರಿಂದ ಬೆಳಿಗ್ಗೆಯ ಸ್ವಚ್ಛ ಗಾಳಿಯೂ ಸಿಗುತ್ತದೆ.

'ಉತ್ಥಾನ ದ್ವಾದಶಿ'ಯ ದಿನ ತುಳಸಿ ಜೊತೆಗೆ ಅಗಸೆ ಮತ್ತು ನೆಲ್ಲಿ ಕೊಂಬೆಯನ್ನು ಕಟ್ಟಿ ಪೂಜಿಸುತ್ತಾರೆ. ನಂತರ ನೆಲ್ಲಿಕಾಯಿಯಲ್ಲಿ ದೀಪ ಹಚ್ಚಿ ಆರತಿ ಮಾಡುತ್ತಾರೆ. ದೀಪಾವಳಿಯ ಕಡೇ ಹಬ್ಬವಾದ ತುಳಸಿ ಕಾರ್ತೀಕದಂದು ದೀಪೋತ್ಸವ, ಪಟಾಕಿ ಸಿಡಿತವೂ ನಡೆಯುತ್ತದೆ. ತುಳಸಿ ಕಟ್ಟೆಗೆ ಚಪ್ಪರ ಕಟ್ಟುತ್ತಾರೆ. ಕೃಷ್ಣನ ವಿಗ್ರಹವನ್ನು ತುಳಸಿ ಕಟ್ಟೆಯಲ್ಲಿಟ್ಟು ಪೂಜಿಸುತ್ತಾರೆ. ನೆಲ್ಲಿಕಾಯಿಯಲ್ಲಿ ದೀಪ ಹಚ್ಚಿ ಆರತಿ ಮಾಡುತ್ತಾರೆ. ಮುತ್ತೈದೆಯರನ್ನು ಕರೆದು ಅರಿಶಿನ-ಕುಂಕುಮ, ತಾಂಬೂಲ ಕೊಡುತ್ತಾರೆ. ಈ ಪೂಜೆ ರಾತ್ರಿ ನಡೆಯುವುದು. ಲಕ್ಷ್ಮಿಯು ಏಳುವ ದಿವಸ ದೀಪಾವಳಿಯಾದರೆ, ವಿಷ್ಣುವು ಏಳುವ ದಿವಸ ಉತ್ಥಾನ ದ್ವಾದಶಿ. ದೀಪಗಳಿಂದ ಅಲಂಕೃತವಾದ ತುಳಸಿ ಕಟ್ಟೆ ನೋಡಲು ಚೆನ್ನ. ಆದ್ದರಿಂದ ಈ ಹಬ್ಬ 'ಕಿರು ದೀಪಾವಳಿ' ಎಂದು ಹೆಸರು ಪಡೆದಿದೆ. ಈ ಹಬ್ಬ ಕಾರ್ತೀಕ ಮಾಸದಲ್ಲಿ ಬರುವುದರಿಂದ ಇದನ್ನು 'ತುಳಸಿ ಕಾರ್ತೀಕ' ಎನ್ನುತ್ತಾರೆ. ಉತ್ಥಾನ ದ್ವಾದಶಿ ಬೃಂದಾವನದಲ್ಲಿ ಮಲಗಿರುವ ಕೃಷ್ಣನನ್ನು ಎಚ್ಚರಿಸುವ ದಿನ. ಈ ದಿನ ಚಾತುರ್ಮಾಸದ ಕಡೆಯ ದಿನ.

ಸಮುದ್ರ ಮಥನದಲ್ಲಿ ಬಂದ ಅಮೃತ ಕಳಶವನ್ನು ವಿಷ್ಣುವು ಪಡೆದಾಗ ಅವನ ಕಣ್ಣುಗಳಲ್ಲಿ ಆನಂದ ಬಾಷ್ಪ ಸುರಿಯಿತು. ಈ ಕಣ್ಣೀರಿನ ಒಂದೆರಡು ಹನಿಗಳು ಈ ಕಳಶದಲ್ಲಿ ಬಿದ್ದಾಗ ಅಲ್ಲಿ ತುಳಸಿ ಗಿಡ ಹುಟ್ಟಿತೆಂದು ಪ್ರತೀತಿ.

ವಿಷ್ಣುವು ಶಂಕಾಸುರನೆಂಬ ರಾಕ್ಷಸನನ್ನು ಭಯಂಕರ ಯುದ್ಧದಲ್ಲಿ ಕೊಂದ ಬಳಿಕ, ಆಯಾಸಗೊಂಡು ಆಷಾಢ ಶುದ್ಧ ಏಕಾದಶಿಯಂದು ಕ್ಷೀರ ಸಮುದ್ರದಲ್ಲಿ ಮಲಗಿ ನಿದ್ದೆ ಹೋದ. ಕಾರ್ತೀಕ ಶುಕ್ಲ ದ್ವಾದಶಿಯಂದು ಈ ದೀರ್ಘ ನಿದ್ದೆಯಿಂದ ಎಚ್ಚೆತ್ತ. ಆದ್ದರಿಂದ ಈ ದಿನವನ್ನು ಉತ್ಥಾನ ದ್ವಾದಶಿ ಎಂದೂ ಕರೆಯುತ್ತಾರೆ. 'ಉತ್ಥಾನ' ಎಂದರೆ ಎಚ್ಚರಗೊಳ್ಳು ಎಂದು ಅರ್ಥ. ಈ ದಿನವೇ ವಿಷ್ಣುವು ತುಳಸಿಯನ್ನು ಮದುವೆ ಆದ- ಹೀಗೆಲ್ಲ ಪುರಾಣ ಹೇಳುತ್ತದೆ.

ತುಳಸಿಗೆ 'ವೃಂದಾ' ಅಥವಾ 'ಬೃಂದಾ' ಎನ್ನುವ ಇನ್ನೊಂದು ಹೆಸರಿದೆ. ಅದರಿಂದಲೇ ತುಳಸಿ ಕಟ್ಟೆಗೆ 'ಬೃಂದಾವನ' ಎಂಬ ಹೆಸರೂ ಬಂದಿದೆ. ವೃಂದಾ ಜಲಂಧರನೆಂಬ ರಾಕ್ಷಸನ ಪತ್ನಿ. ಮಹಾ ಪತಿವ್ರತೆ. ಈ ಪಾತಿವ್ರತ್ಯದ ಪ್ರಭಾವದಿಂದ ಜಲಂಧರನನ್ನು ಯಾರೂ ಕೊಲ್ಲಲು ಸಾಧ್ಯವಾಗಲಿಲ್ಲ. ಅವನು ದೇವತೆಗಳಿಗೆ ಕಾಟ ಕೊಡಲು ಪ್ರಾರಂಭಿಸಿದ. ಅವನ ಕಾಟ ತಾಳಲಾಗದೆ ದೇವತೆಗಳು ವಿಷ್ಣುವನ್ನು ಮೊರೆ ಹೋಗುತ್ತಾರೆ. ಅತ್ತ ಜಲಂಧರನು ದೇವತೆಗಳೊಡನೆ ಯುದ್ಧ ಮಾಡುತ್ತಿದ್ದರೆ, ಇತ್ತ ವಿಷ್ಣುವು ಜಲಂಧರನ ವೇಷದಲ್ಲಿ ಬಂದು ಬೃಂದಳನ್ನು ಸೇರುತ್ತಾನೆ. ಅವಳ ಪಾತಿವ್ರತ್ಯ ಭಂಗವಾಗಿ ಜಲಂಧರನು ಯುದ್ಧದಲ್ಲಿ ಸಾಯುತ್ತಾನೆ. ವಿಷ್ಣುವಿನಿಂದಾದ ಮೋಸವನ್ನು ತಿಳಿದ ಬೃಂದಳು ವಿಷ್ಣುವಿಗೆ ಮುಂದೆ ಪತ್ನಿ ವಿಯೋಗವಾಗಲಿ ಎಂದು ಶಪಿಸಿ ಅಗ್ನಿ ಪ್ರವೇಶ ಮಾಡುತ್ತಾಳೆ. ಚಿತೆಯ ಸುತ್ತಾ ಪಾರ್ವತಿಯು ತುಳಸಿ ಮತ್ತು ನೆಲ್ಲಿ ಗಿಡಗಳಿಂದ ಬೃಂದಾವನವನ್ನು ನಿರ್ಮಿಸುತ್ತಾಳೆ. ಅದು ಬೆಳೆದು ದೊಡ್ಡದಾದಾಗ ವಿಷ್ಣುವು ಅವಳನ್ನು ಮನಸಾ ವರಿಸುತ್ತಾನೆ. ಮುಂದೆ ತುಳಸಿಯೇ ರುಕ್ಮಿಣಿಯಾಗಿ ಹುಟ್ಟಿ ಕೃಷ್ಣನನ್ನು ಕಾರ್ತೀಕ ಶುದ್ಧ ದ್ವಾದಶಿಯಂದು ವಿವಾಹವಾಗುತ್ತಾಳೆ.

## ಇನ್ನೂ ಒಂದು ಕಥೆ

ಸಮುದ್ರ ಮಥನದ ಕಾಲದಲ್ಲಿ ಹುಟ್ಟಿದ ತುಳಸಿಯು ವಿಷ್ಣುವನ್ನು ನೋಡಿ ಮೋಹಿತಳಾಗಿ ಮದುವೆಯಾಗಬೇಕೆಂದು ಬಯಸುತ್ತಾಳೆ. ಇದರಿಂದ ಸಿಟ್ಟಿಗೆದ್ದ ಲಕ್ಷ್ಮಿಯು 'ಗಿಡವಾಗು' ಎಂದು ತುಳಸಿಗೆ ಶಾಪ ನೀಡುತ್ತಾಳೆ. ದಯಾಮಯನಾದ ವಿಷ್ಣುವು ತುಳಸಿಯ ಆಸೆಯನ್ನು ನೆರವೇರಿಸುವುದಾಗಿ ವಚನ ಕೊಡುತ್ತಾನೆ. ವಿಷ್ಣು ಸಾಲಿಗ್ರಾಮದ ರೂಪದಲ್ಲಿದ್ದಾಗ ತುಳಸಿಯನ್ನು ಜೊತೆಯಲ್ಲಿ ಇಟ್ಟುಕೊಳ್ಳುವುದಾಗಿ ವಚನ ನೀಡುತ್ತಾನೆ. ಹೀಗಾಗಿ ತುಳಸಿಯನ್ನು ಪ್ರತೀ ದಿನ ಪೂಜಿಸುತ್ತಾರೆ. ತುಳಸಿಯು ಲಕ್ಷ್ಮಿಯ ಇನ್ನೊಂದು ರೂಪವೆಂದು ಸಹ ಹೇಳುತ್ತಾರೆ.

ತುಳಸಿಗಳಲ್ಲಿ 2 ವಿಧ; ಕೃಷ್ಣ ತುಳಸಿ ಮತ್ತು ಶ್ರೀ ತುಳಸಿ ಅಥವಾ ವಿಷ್ಣು ತುಳಸಿ. ಹಸಿರು ತುಳಸಿಯನ್ನು ಶ್ರೀ ತುಳಸಿ ಮತ್ತು ತುಸು ಕೆಂಪು ಮಿಶ್ರಿತ ಬಣ್ಣದ ತುಳಸಿಯನ್ನು ಕೃಷ್ಣ ತುಳಸಿಯೆಂದು ಹೇಳುತ್ತಾರೆ. ಸ್ವಲ್ಪ ತೇವಾಂಶ ಇದ್ದರೆ ಸಾಕು, ತುಳಸಿ ಎಲ್ಲಾ ಕಡೆಯೂ ಬೆಳೆಯುತ್ತದೆ. ಇದನ್ನು ಸಂಸ್ಕೃತದಲ್ಲಿ 'ಮಂಜರಿ', ಮಲಯಾಳಂನಲ್ಲಿ 'ತ್ರಿಟ್ಟುವಾ', ಮರಾಠಿ, ತಮಿಳು, ತೆಲುಗು ಮತ್ತು ಕನ್ನಡದಲ್ಲಿ 'ತುಳಸಿ' ಎನ್ನುತ್ತಾರೆ.

## ಔಷಧಿಯ ಆಗರ

ತುಳಸಿಯಲ್ಲಿ ಅನೇಕ ಔಷಧೀಯ ಗುಣಗಳಿವೆ. ಇದು ಕ್ರಿಮಿನಾಶಕವಾದ್ದರಿಂದ, ಬೇಳೆ-ಕಾಳು ಸಂಗ್ರಹಿಸುವಾಗ ಅದಕ್ಕೆ ತುಳಸಿ ಎಲೆಗಳನ್ನು ಹಾಕುತ್ತಾರೆ. ತುಳಸಿಯಲ್ಲಿ ಸೋಂಕು ನಿವಾರಕ ಗುಣ ಇದೆ. ತುಳಸಿ ಇರುವೆಡೆ ಸೊಳ್ಳೆ ಬರುವುದಿಲ್ಲ. ಕೆಮ್ಮು, ನೆಗಡಿ, ಅಜೀರ್ಣ ಮುಂತಾದ ರೋಗಗಳು ಬಂದಾಗ ತುಳಸಿಯ ಕಷಾಯ ಕುಡಿಯುತ್ತಾರೆ. ಚರ್ಮದ ಕಾಯಿಲೆ, ಕಿವಿ ನೋವುಗಳಿಗೂ ತುಳಸಿ ಸಿದ್ಧೌಷಧ. ತುಳಸಿ ಬೀಜಗಳನ್ನು ಮೂತ್ರ ಸಂಬಂಧಿ ಕಾಯಿಲೆಯ ಔಷಧಿಗೆ ಉಪಯೋಗಿಸುತ್ತಾರೆ.